ಕೊಡಗು ಜಿಲ್ಲೆಯಲ್ಲಿರುವ ಪಶುವೈದ್ಯಶಾಲೆಗಳು.

೨೦೭೧. ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ).— ಮಾನ್ಯ ಗ್ರಾಮಾಂತರಾಭಿವೃದ್ಧಿ, ಪಂಚಾಯತ್ ರಾಜ್, ವಕ್ಫ್ ಹಾಗೂ ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿರುವ ಪಶು ಸಂಗೋಪನಾ ಆಸ್ಪತ್ರೆಗಳೆಷ್ಟು ?
(ತಾಲ್ಲೂಕುವಾರು ವಿವರ ನೀಡುವುದು)

ಆ) ೧೯೮೪-೮೫, ೧೯೮೫-೮೬, ೧೯೮೬-೮೭ನೇ ಸಾಲುಗಳಲ್ಲಿ ಮಂಜೂರು ಮಾಡಲಾಗಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು ?

ಇ) ಈ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆಯೇ ಅಥವಾ ಇಲ್ಲವೇ ? ಎಲ್ಲಾ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡ ಸೌಲಭ್ಯ ಒದಗಿಸಲಾಗಿದೆಯೇ ?

ಈ) ಸದರಿ ಆಸ್ಪತ್ರೆಗಳಿಗೆ ಔಷಧಿಗಳನ್ನು ಸರಿಯಾದ ರೀತಿಯಲ್ಲಿ ಒದಗಿಸುತ್ತಿಲ್ಲವೆಂಬ ದೂರು ಸರಕಾರದವರ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್(ಪಶುಸಂಗೋಪನೆ, ಮಂತ್ರಿ ಪಶುವೈದ್ಯ ಸೇವೆಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಕೊಡಗು ಜಿಲ್ಲೆಯಲ್ಲಿ ಒಟ್ಟು ೩೨ ಪಶುವೈದ್ಯ ಶಾಲೆಗಳಿದ್ದು ಅವುಗಳ ತಾಲ್ಲೂಕುವಾರು ವಿವರ ಇಂತಿದೆ.

	ತಾಲ್ಲೂಕು	ಪಶು ಆಸ್ಪತ್ರೆಗಳು	ಪಶುವೈದ್ಯ ಶಾಲೆಗಳು	ಗ್ರಾಮಾಂತರ ಪಶುವೈದ್ಯ ಶಾಲೆಗಳು	ಒಟ್ಟು
೧	ಮಡಿಕೇರಿ	೧	೧	೭	೯
೨	ಸೋಮವಾರಪೇಟೆ	—	೫	೪	೯
೩	ವಿರಾಜಪೇಟೆ	—	೬	೯	೧೪
	ಒಟ್ಟು	೧	೧೨	೧೯	೩೨

ಆ) ಈ ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಯಾವ ಪಶುವೈದ್ಯ ಶಾಲೆಯೂ ಮಂಜೂರಾಗಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ, ೨೫ ಆಸ್ಪತ್ರೆಗಳಿಗೆ ಸ್ವಂತ ಸರ್ಕಾರಿ ಕಟ್ಟಡಗಳಿವೆ, ಉಳಿದ ೭ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡ ಒದಗಿಸಬೇಕಾಗಿದೆ.

ಈ) ಬಂದಿಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀಮತಿ ಸುಮಾ ವಸಂತ್.—ಸನ್ಮಾನ್ಯ ಅಧ್ಯಕ್ಷರೇ, ಕಳೆದ ೩ ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಯಾವ ಪಶುವೈದ್ಯ ಶಾಲೆಯನ್ನು ತೆರೆದಿಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಮಾನ್ಯ ಸಚಿವರು ಒಂದು ಸಾರಿ ವೀರಾಜಪೇಟೆಗೆ ಬಂದಿದ್ದಾಗ ಈ ಪಶುವೈದ್ಯ ಶಾಲೆಗಳನ್ನು ತೆರೆಯುವುದಕ್ಕೆ ಸ್ಥಳ ಒದಗಿಸಿಕೊಟ್ಟರೆ ಆಸ್ಪತ್ರೆಗಳನ್ನು ಮಂಜೂರು ಮಾಡುತ್ತೇವೆಂದು ಹೇಳಿದ್ದರು. ಈ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆಂದು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ಥಳ ಒದಗಿಸಿಕೊಟ್ಟರೆ ಆಸ್ಪತ್ರೆಗಳನ್ನು ಮಂಜೂರು ಮಾಡುತ್ತೇನೆ.

ಶ್ರೀಮತಿ ಸುಮ ವಸಂತ್.—೭ ಪಶುವೈದ್ಯ ಶಾಲೆಗಳಿಗೆ ಸ್ವಂತ ಕಟ್ಟಡಗಳು ಇಲ್ಲವೆಂದು ಹೇಳಿದ್ದಾರೆ. ಯಾವಾಗ ಈ ಕಟ್ಟಡಗಳನ್ನು ಸರ್ಕಾರ ಕಟ್ಟಿಸಿಕೊಡುತ್ತದೆಂದು ನಾನು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಒಂದೇ ಸಾರಿ ೭ ಪಶುವೈದ್ಯ ಶಾಲೆಗಳಿಗೂ ಕಟ್ಟಡಗಳನ್ನು ಕಟ್ಟಿಕೊಡುವುದಕ್ಕಾಗುವುದಿಲ್ಲ. ಹಂತ ಹಂತವಾಗಿ ಕಟ್ಟಡಗಳನ್ನು ಕಟ್ಟುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ.

ಶ್ರೀಮತಿ ಸುಮ ವಸಂತ್.—ಇತ್ತೀಚೆಗೆ ನಮ್ಮ ಜಿಲ್ಲೆಯಲ್ಲಿ ಜಾನುವಾರುಗಳಿಗೆ ಮತ್ತು ಹುಚ್ಚುನಾಯಿ ಕಡಿತಕ್ಕೆ ಔಷಧಿ ಇಲ್ಲದೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ, ಸರಿಯಾಗಿ ಔಷಧಗಳನ್ನು ಒದಗಿಸಿಕೊಡುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಔಷಧಗಳನ್ನು ಒದಗಿಸಿಕೊಡುವುದು ನಮ್ಮ ಆದ್ಯಕರ್ತವ್ಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಔಷಧಗಳು ಇಲ್ಲವೆಂದು ಅವರು ಹೇಳುತ್ತಿದ್ದಾರೆ. ತಕ್ಷಣ ಈ ಔಷಧಗಳನ್ನು ಕಳುಹಿಸಿಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ಆಗಲೇ ಹೇಳಿದ್ದೇನೆ.

ಶ್ರೀ ಡಿ. ಎ. ಚಿನ್ನಪ್ಪ.—ಪಶುವೈದ್ಯ ಶಾಲೆಗಳು ೧೦ ಕಿಲೋಮೀಟರ್‌ಗೆ ಒಂದಾದರೂ ಇರಬೇಕೆಂದು ನಿಯಮ ಇದೆ. ಆದರೆ, ನಮ್ಮ ಕೊಡಗು ಜಿಲ್ಲೆಯಲ್ಲಿ ೩೦ ಕಿಲೋಮೀಟರ್‌ಗೆ ಒಂದರಂತೆ ಕೂಡ ಪಶುವೈದ್ಯ ಶಾಲೆ ಇಲ್ಲ. ಮೂರು ವರ್ಷಗಳ ಹಿಂದೆ ಮರಗೋಡು ಹಾಗೂ ಇನ್ನೊಂದು ಕಡೆ ಪಶುವೈದ್ಯ ಶಾಲೆಯನ್ನು ತೆರೆಯಬೇಕೆಂದು ಹೇಳಿ ರಿಪೋರ್ಟ್ ಬಂದಾಗಿದೆ. ಕಡೇ ಹಂತದಲ್ಲಿ ಸರ್ಕಾರ ಇದನ್ನು ತಡೆಹಿಡಿದಿದೆ. ಇದರ ಬಗ್ಗೆ ಏನು ಹೇಳುತ್ತೀರೆಂದು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿದ್ದರೆ, ಅದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇನೆ.

ಶ್ರೀಮತಿ ಸುಮಾ ವಸಂತ್.—ಅಧ್ಯಕ್ಷರೆ, ಸದರಿ ಆಸ್ಪತ್ರೆಗೆ ಔಷಧಿ ಸರಬರಾಜು ಸರಿಯಾಗಿ ಆಗುತ್ತಿಲ್ಲ ಎಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಈ ಸರಕಾರ ಬಂದಮೇಲೆ ಹುಚ್ಚುನಾಯಿಗಳ ಸಂಖ್ಯೆ ಹೆಚ್ಚಿಗೆ ಆಯಿತು. ಮೊದಲು ಒಂದರಡು ಇದ್ದುದು ಈಗ ಹೆಚ್ಚಿಗೆ ಆಗಿವೆ.

ಶ್ರೀ ಎ. ಲಕ್ಷ್ಮೀಸಾಗರ್.—ಮೊದಲೇ ಇದ್ದ ಹುಚ್ಚುನಾಯಿಗಳು ಇನ್ನೂ ಬದುಕಿಕೊಂಡಿವೆ ಎಂದು ಕಾಣುತ್ತದೆ.

ಶ್ರೀ ಪಟಿಮಕ್ಕಿ ರತ್ನಾಕರ್.—ಇರುವ ಹುಚ್ಚುನಾಯಿಗಳು ಕೂಡ ಸಾಯುವುದಕ್ಕೆ ಒಪ್ಪುತ್ತಿಲ್ಲ...

ಶ್ರೀ ಲಕ್ಷ್ಮೀಸಾಗರ್.—ಹುಚ್ಚುನಾಯಿಗಳನ್ನು ಸಾಯಿಸಕ್ಕಂಥ ಕೆಲಸ ನಡೆಯುತ್ತಾ ಇವೆ. ಅವುಗಳು ಏಕೆ ಸಾಯುತ್ತಾ ಇಲ್ಲ ಎಂದು ತಿಳಿಯುತ್ತಿಲ್ಲ. ವಿಷ ಹಾಕಿದರೂ ಕೂಡ ಕೆಲವು ಸಾಯುತ್ತಾ ಇಲ್ಲ...

ಶ್ರೀ ಎಸ್. ಬಂಗಾರಪ್ಪ.—ಹುಚ್ಚುನಾಯಿಗಳು ಇಲ್ಲದ ಹಾಗೆ ಮಾಡುತ್ತೇವೆ ಎಂದು ಹೇಳಿದ್ದೀರಿ. ನಿಮ್ಮ ಹತ್ತಿರ ಅವುಗಳಿಗೆ ಔಷಧಿಯನ್ನು ಕಂಡು ಹಿಡಿಯುವುದಕ್ಕೆ ಆಗುವುದಿಲ್ಲ ಎಂದರೆ ಮತ್ತೆ ಸರಕಾರವನ್ನು ಹೇಗೆ ನಡೆಸುತ್ತೀರಿ ಎಂದು ಜನರು ಆಡಿಕೊಳ್ಳುತ್ತಾ ಇದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಪ್ರಾಣಿದಯೆಯನ್ನು ಇಟ್ಟುಕೊಂಡಿದ್ದೇವೆ. ನಿಜವಾಗಿ ಹುಚ್ಚು ಹಿಡಿದವುಗಳಿಗೆ ಮಾತ್ರ ಔಷಧಿಯನ್ನು ಕೊಡುತ್ತೇವೆ...

ಶ್ರೀಮತಿ ಸಂಮಾ ವಸಂತ್.—ನಮ್ಮ ಪಶುವೈದ್ಯ ಶಾಲೆಗಳಿಗೆ ಸರಿಯಾಗಿ ಔಷಧಿ ಪೂರೈಕೆ ಯಾಗುತ್ತಾ ಇಲ್ಲ. ಅಲ್ಲಿಗೆ ಹೆಚ್ಚಿಗೆ ಔಷಧಿಗಳನ್ನು ಒದಗಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶಿವಮೊಗ್ಗ ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿ

೨೧೪೪. ಶ್ರೀ ಬಿ. ಸ್ವಾಮಿರಾವ್ (ಹೊಸ ನಗರ).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯು ಅಸ್ತಿತ್ವದಲ್ಲಿರುವುದು ನಿಜವೆ ?

ಆ) ಹಾಗಿದ್ದಲ್ಲಿ, ಶೆಟ್ಟಿಹಳ್ಳಿ ಪುರದಾಳು ಮತ್ತು ಮಲೆಶಂಕರ ಪ್ರದೇಶಗಳ ಕಾಡಾನೆ ಹಾವಳಿಯು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಗಾಡಿಕೊಪ್ಪದ ರೈತನೊಬ್ಬನನ್ನು ಕಾಡಾನೆ ಕೊಂದು ಹಾಕಿರುವ ಬಗ್ಗೆ ಸರ್ಕಾರಕ್ಕೆ ವರದಿ ಬಂದಿದೆಯೇ ?

ಈ) ಹಾಗಿದ್ದಲ್ಲಿ ಕಾಡಾನೆಯ ಹಾವಳಿಯನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ನಿಜ.

ಆ) ಬಂದಿದೆ.

ಇ) ಬಂದಿದೆ.

ಈ) ಕಾಡಾನೆಗಳು ಗ್ರಾಮದೊಳಗೆ ಅಥವಾ ಗ್ರಾಮಸ್ಥರ ಖಾಸಗೀ ಜಮೀನಿಗೆ ಬಂದರೆ ಅವುಗಳನ್ನು ಅರಣ್ಯದೊಳಗೆ ಓಡಿಸಲು ಕೂಡಲೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅರಣ್ಯ ಅಧಿಕಾರಿಗಳಿಗೆ ಆದೇಶ ನೀಡಲಾಗಿದೆ. ಆನೆಗಳು ಅರಣ್ಯದಿಂದ ಹೊರ ಹೋಗದಂತೆ ಅರಣ್ಯ ಗಡಿಯ ಸುತ್ತ ಕಂದಕವನ್ನು ತೋಡಲಾಗಿದೆ. ಇದಲ್ಲದೆ ಗ್ರಾಮಾಂತರ ಜನರ ಮತ್ತು ಕಾಡಿನಲ್ಲಿ ವಾಸಿಸುವ ಗಂಡ್ಡಗಾಡು ಜನರ ಸಹಕಾರವನ್ನು ಈ ದಿಸೆಯಲ್ಲಿ ಪಡೆಯಲಾಗುತ್ತಿದೆ.

ಶ್ರೀ ಬಿ. ಸ್ವಾಮಿರಾವ್.— ಮಾನ್ಯ ಅಧ್ಯಕ್ಷರೆ ನಾನು ಪ್ರಶ್ನೆ ಕೇಳಿದ ಮೇಲೆ ಮತ್ತೆ ಯಾರಿಗಾದರೂ ಕಾಡಾನೆಗಳು ಕೊಂದು ಹಾಕಿವೆಯೇ ? ಪರಿತ್ತ ಕಂದಕಗಳನ್ನು ತೋಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ, ಬಹುಶಃ ಈ ತರಹದ ಉತ್ತರವನ್ನು ಕೊಡುವುದರ ಮೂಲಕ ಅಧಿಕಾರಿಗಳು ತಮಗೂ ಸಹ ಮೋಸ ಮಾಡಿದ್ದಾರೆ ಎಂದು ಹೇಳಬೇಕಾಗುತ್ತದೆ. ನಿಜವಾಗಿಯೂ ಅಲ್ಲಿ ಕಂದಕಗಳನ್ನು ತೋಡಿಲ್ಲ. ನನಗೆ ಗೊತ್ತಿದೆ, ಏಕೆಂದರೆ ವಿಧಾನಸೌಧ ಬಿಟ್ಟವನು ನಾನು ಯಾವಾಗಲೂ ನನ್ನ ಕ್ಷೇತ್ರಕ್ಕೆ ಹೋಗುತ್ತಿರುತ್ತೇನೆ ಒಂದು ವೇಳೆ ಕಂದಕ ತೋಡಿದ್ದೇವೆ ಎಂದು ಅಧಿಕಾರಿಗಳು ಸುಳ್ಳು ಲೆಕ್ಕ ಕೊಟ್ಟು ಬಿಲ್ ಮಾಡಿಕೊಂಡಿರಬಹುದು. ಅಂತೆಯೇ ಈಗ ಕಾಡಾನೆಗಳು ಎಷ್ಟು ಇದ್ದಾವೆ ಎಂದು ತಿಳಿಸುತ್ತೀರಾ ?

ಶ್ರೀ ಜಿ. ಎಸ್. ಬಾಗಲಕೋಟ್.— ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರು (ಈ) ಪ್ರಶ್ನೆಗೆ ಕಾಡಾನೆಯ ಹಾವಳಿಯನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡ ಕ್ರಮಗಳೇನು ಎಂದು ಕೇಳಿದ್ದಕ್ಕೆ, ಅರಣ್ಯ ಗಡಿಯ ಸುತ್ತ ಕಂದಕವನ್ನು ತೋಡಲಾಗಿದೆ ಎಂದು ಹೇಳಿದ್ದೇನೆ ಸರಕಾರದವರು ೨೧೨೭ ಕಿ.ಮೀ ಉದ್ದದ ಕಂದಕವನ್ನು ಬೇರೆ ಬೇರೆ ಕಡೆಗಳಲ್ಲಿ ತೋಡಿದ್ದಾರೆ. ಮಾನ್ಯ ಸದಸ್ಯರ ಅನಿಸಿಕೆಯೂ ನಿಜ ಶಿವಮೊಗ್ಗ ಜಿಲ್ಲೆಯ ಕೆಲವು ಕಡೆಗಳಲ್ಲಿ ಈ ರೀತಿಯ ಕಂದಕವನ್ನು ತೆಗೆದಿಲ್ಲ. ಅಲ್ಲಿಯೂ ಕೂಡ ಕಂದಕವನ್ನು ತೆಗೆಯುವ ಯೋಜನೆಯು ಸರಕಾರಕ್ಕೆ ಇದೆ. ಹಾಗೆಯೇ ಮಾನ್ಯ ಸದಸ್ಯರು ಹೇಳಿರುವ ಜಾಗದಲ್ಲಿಯೂ ಕೂಡ ಕಂದಕವನ್ನು ತೆಗೆಯುವ ಯೋಜನೆಯನ್ನು ಚಾಲ್ತಿಯಲ್ಲಿ ತರುತ್ತೇವೆ.